ಆಂದೋಲನ

# ಎಟಿಎಂಇ ಕಾಲೇಜು ವಾರ್ಷಿಕೋತ್ಸವ

## 'ಆತ್ರೀಯ–2ಕೆ25' ಸಂಭ್ರಮಾಚರಣೆ



ಮೈಸೂರು: ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಕಾಲೇಜಿನ ವಾರ್ಷಿಕೋತ್ಸವ 'ಆತ್ರೀಯ–2ಕೆ25' ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಜಿಲ್ಲಾ ವಿಶೇಷಚೇತನ ಮತ್ತು ಅಂಗವಿಕಲ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ್, ಗೌರವ ಅತಿಥಿಗಳಾಗಿದ್ದ ರಾಜ್ಯ ಅಂಗವಿಕಲರ ಸಂಘದ ಉಪಾಧ್ಯಕ್ಷ ಶ್ರೀಧರ ದೀಕ್ಷಿತ್ ಮತ್ತು ಉದಯೋನ್ಮುಖ ನಟ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿ ವಿರಾಟ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಕಳಕಳಿಯನ್ನು ಮೂಡಿಸುವ ಉದ್ದೇಶದಿಂದ ಪ್ರತಿವರ್ಷವೂ ಸಮಾಜದಲ್ಲಿನ ಅಶಕ್ತರು, ವಿಶೇಷಚೇತನರು, ಹುತಾತ್ಮ ಸೈನಿಕರ ಕುಟುಂಬಗಳಿಗೆ ಸಂಸ್ಥೆಗಳ ವತಿಯಿಂದ ಆರ್ಥಿಕ ನೆರವು ನೀಡಲಾಗುತ್ತಿದೆ. ಅದೇ ರೀತಿ ಈ ವರ್ಷವೂ ಅವಶ್ಯವಿರುವ ಮೂವರು ವಿಶೇಷಚೇತನರಿಗೆ ಧನಸಹಾಯ ಮಾಡಲಾಯಿತು.

ಈ ವೇಳೆ ಮಾತನಾಡಿದ ಶಂಕರಗೌಡ ಪಾಟೀಲ್ ಅವರು, ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ವಾರ್ಷಿಕೋತ್ಸವ ಆಚರಣೆ ಮಾಡುವುದು ಮಾದರಿ ವಿಷಯ ಎಂದರು.

ಶ್ರೀಧರ ದೀಕ್ಷಿತ್ ಅವರು ಮಾತನಾಡಿ, ವಿಶೇಷಚೇತನರು ಮತ್ತು ಅಂಗವಿಕಲರು ಆತ್ಮಸ್ಥೈರ್ಯದಿಂದ ಬದುಕಬೇಕು. ಹಾಗೆಯೇ ವಿಶೇಷಚೇತನರಿಗೆ ಸಹಾಯ ಹಸ್ತ ನೀಡುತ್ತಿರುವ ಎಟಿಎಂಇ ಸಂಸ್ಥೆ ಕಾರ್ಯ ನಿಜಕ್ಕೂ ಮಾದರಿಯಾಗಿದೆ ಎಂದರು.

ಇದೇ ವೇಳೆ ವಿಶೇಷಚೇತನ ಶ್ರೀಧರ ದೀಕ್ಷಿತ್ ಅವರು, ನಾಗಭೂಷಣ ಎಂಬ ಅನಾಥಶ್ರಮವೊಂದರ ದೃಷ್ಟಿಮಾಂದ್ಯ ವಿಶೇಷಚೇತನ ವ್ಯಕ್ತಿ ಹಾಗೂ ಬಹು ಅಂಗವೈಕಲ್ಯ ಇರುವ ಒಂಟಿಕೊಪ್ಪಲು ರವಿ ಎಂಬವರಿಗೆ ಎಟಿಎಂಇ ಆಡಳಿತ ಮಂಡಳಿ ಅಧ್ಯಕ್ಷ ಎಲ್.ಅರುಣ್ ಕುಮಾರ್, ಅಡಳಿತ ಮಂಡಳಿ ಪದಾಧಿಕಾರಿಗಳ ಪರವಾಗಿ ಆರ್ಥಿಕ ನೆರವಿನ ಚೆಕ್ ನೀಡಿ ಅಭಿನಂದಿಸಿದರು.

ಎಲ್.ಅರುಣ್‌ಕುಮಾರ್ ಅವರು ಎಟಿಎಂಇ ಕಾಲೇಜಿನ ನವೀಕೃತ ಲಾಂಛನವನ್ನು ಬಿಡುಗಡೆಗೊಳಿಸಿ ಮಾತನಾಡಿದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಟ ವಿರಾಟ್ ವಿದ್ಯಾರ್ಥಿಗಳೊಂದಿಗೆ ವೇದಿಕೆಯಲ್ಲಿ ನೃತ್ಯ ಮಾಡಿ ಎಲ್ಲರನ್ನೂ ರಂಜಿಸಿದರು.

ಆಡಳಿತ ಮಂಡಳಿ ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್.ವೀರೇಶ್, ಟ್ರಸ್ಟಿ ಎಚ್.ವೆಂಕಟೇಶ್, ಆಡಳಿತಾಧಿಕಾರಿ ಡಾ. ಸಚ್ಚಿದಾನಂದಮೂರ್ತಿ, ಪ್ರಾಂಶುಪಾಲರಾದ ಡಾ.ಎಲ್.ಬಸವರಾಜ್, ಡೀನ್ ಡಾ.ಕೆ. ಶ್ರೀನಿವಾಸ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಪುಟ್ಟೇಗೌಡ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಂತೋಷ್ ಮತ್ತು ಪದಾಧಿಕಾರಿಗಳು ಸೇರಿದಂತೆ ಕಾಲೇಜಿನ ಸಿಬ್ಬಂದಿ ವರ್ಗದವರು, ಪೋಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರೊ.ಸಿ.ಚಂದ್ರಶೇಖರ್ ಮತ್ತು ಪ್ರೊ.ಎಂ.ಎಂ.ಕೀರ್ತನಾ ವೇದಿಕೆ ಕಾರ್ಯಕ್ರಮ ನಿರೂಪಿಸಿದರು, ಡಾ.ಎಲ್.ಬಸವರಾಜ್ ಸ್ವಾಗತಿಸಿದರು. ಡಾ.ಶ್ರೀನಿವಾಸ ವಂದಿಸಿದರು, ಡಾ. ಪುಟ್ಟೇಗೌಡ ಆತ್ರೀಯ–2ಕೆ25 ವರದಿ ಮಂಡಿಸಿದರು. ಪ್ರೊ.ಸ್ಫೂರ್ತಿ ಪ್ರಾರ್ಥನೆ ಮಾಡಿದರು.